ಮೇಷ್ಟ್ರು ಈ ಕಥೆಗಾರ ಮಂಜಣ್ಣನ ಕತೆಗಳನ್ನು ಸಾಯಿತಿಗಳ ಪುಸ್ತಕದಿಂದ ಆರಿಸಾರಿಸಿ ಹೇಳ್ತಿದ್ರು. ಅದನ್ನು ಹಂಗಂಗೇ ಈ ಮಾಸ್ತ್ಯಪ್ಪ ಕಲ್ತು ಹಟ್ಟಿ ಬಾಗಲ ಐಕ್ಳಿಗೆಲ್ಲಾ ಹೇಳಿ, 'ಕಥೆಗಾರ ಮಾಸ್ತ್ಯಪ್ಪ' ಅಂತ ಆ ಕೇರಿಗೆ ವರ್ಲ್ಡ್ ಫೇಮಸ್ಸಾಗಿಬಿಟ್ಟಿದ್ದ.

ಆಗಿನ ಕಾಲಕ್ಕೇ ಒಂದೆಕ್ರೆ ಹೊಲ ಹೊಂದಿದ ಹೈದ ಅಂತ ಊರ ಗೌಡ್ರು ಮಾಸ್ತ್ಯಪ್ಪನಿಗೆ ಹರಪನ ಹಳ್ಳಿಯ ಸಮೀಪದ ತೆಲಗಿಯಿಂದ ಒಂದು ಹೆಣ್ಣು ತಂದು ಲಗ್ನ ಮಾಡಿಸಿದ್ದರು. ಮಾಸ್ತ್ಯಪ್ಪನ ಅಪ್ಪ ಗೌಡರ ಮನೆ ಸಂಬಳದಾಳು. ಮಗನೂ ಸಂಬಳಕ್ ಬರಲಿ ಅನ್ನೋದು ಅಪ್ಪನ ಆಸೆ. ಆದರೆ ಗೌಡರೇ, 'ಬೇಡ ಓದಲಿ, ನಿಮ್ಮ ಜನ ಇನ್ನು ಎಷ್ಟು ವರ್ಷ ಗೌಡರ, ಪಟೇಲರ, ಉಳ್ಳವರ ಜೀತ ಮಾಡಿ ಸಾಯಬೇಕು? ಅಂಬೇಡ್ಕರಜ್ಜನ ಕನಸು ನನ್ಸಾಗದ್ ಯಾವಾಗ? ನಿಮ್ ಜನ ಓದಬೇಕಪ್ಪಾ...' ಅಂತ ಶಾಲೆಗೆ ಸೇರಿಸಿದರೂ ಏಳರತನಕ ಓದಿ... ಮುಂದೆ ಒಲ್ಲೆ ಅಂದ ಮಾಸ್ತ್ಯಪ್ಪನಿಗೆ ಗೌಡರೇ ಇದ್ದ ಒಂದೆಕ್ರೆ ಹೊಲದ ಜೊತೆಗೆ ಮತ್ ಎರಡೆಕರೆ ಮಿಟ್ಟಾ ಹೊಡಿಲಂತ ತಮ್ಮ ಜಮೀನು ಕೊಟ್ಟು ಬೆಳೆಸಿ, ಮದುವೆ ಮಾಡಿಸಿದ್ದರು. ಹಂಗೆ ಮಾಸ್ತ್ಯಪ್ಪನ ಮನೆಗೆ ಬಂದ ಹೆಣ್ಣು ಈ ದುರುಗವ್ವ.

'ಕಟ್ಟುಮಸ್ತಾದ ಆಳು. ಎದೆತುಂಬಾ ಮಾಂಸ. ಮೈ ತುಂಬಾ ನೆಣ ತುಂಬ್ಕಂಡೌಳೆ ನಮ್ ಮಾಸ್ತ್ಯಪ್ಪನ ಹೆಂಡ್ರು' ಅಂತ ಹಟ್ಟಿ ಹೈಕ್ಳೆಲ್ಲಾ ಜೊಲ್ಲು ಸುರಿಸೋರೆ! ದಿನಗಳು ಹಂಗೆ ಹೋಗಿ ಹಿಂಗ್ ಬರೋದ್ರಲ್ಲಿ ದುರುಗವ್ವ ಒಂದು ಹೆಣ್ಣು, ಎರಡು ಗಂಡು ಹಡೆದು ಮನೆ ಯಜಮಾನಿಯಾಗಿದ್ದಳು. ಅತ್ತೆ ಮಾವ ಈಕಿಗೆ ಈ ಮಕ್ಕಳು ಹುಟ್ಟೋದರೊಳಗೆ ಶಿವನ ಪಾದ ಸೇರಿದ್ರು.

ಹಂಗ್ ಹುಟ್ಟಿದ ಮೊದಲನೇ ಕೂಸೇ ಈರವ್ವ. ಅಪ್ಪ ಓದಲಿಲ್ಲ, ಅವ್ವ ಓದಲಿಲ್ಲ, ಇವಳಾದರೂ ಓದಲಿ ಅಂತ ಸಂತೋಷಪುರದ ಕರ್ನಾಟಕ ಪಬ್ಲಿಕ್ ಶಾಲೆಗೆ ಹಾಕಿದಳು. ಎಂಟನೇ ಕಿಲಾಸು ದಾಟೋ ಅಷ್ಟರಲ್ಲಿಯೇ ಮನೆ ಮುಂದೆ, ಹಟ್ಟಿ ಬಾಗಿಲಾಗೆ ಪೋಲಿ ಹುಡುಗ್ರು ಬಂದ್ ಬಂದು, ಕಾಗೆ ಹಿಂಡಿನ ತರ ಸೇರದನ್ನ ದುರುಗವ್ವ ನೋಡಿ ಸೊಂಟದ ಕೆಳಗಿನ ಪದ ತಗದು ಒದರಲಾರಂಭಿಸಿದರೂ ಹುಡುಗ್ರು ಈರವ್ವನ ಎದೆ ಭಾರಕ್ಕೆ ಕುಗ್ಗಿ ಹೋಗತೊಡಗಿದರು. ಈರವ್ವನ ಪ್ರಾಯಕ್ಕೆ ದಾವಣಗೆರೆ ಬೆಣ್ಣೆ ದೋಸೆಗೆ ಜನ ಸೇರಂಗೆ ವರ್ಷಾ ವರ್ಷ ಹಟ್ಟಿ ಹುಡುಗ್ರ ದಂಡು ತುಂಬಿ ಬರ್ತಿತ್ತು.

ಜಾಕೀಟು ಹರಿಯಂಗಿರೋ ಎದೆ, ತನ್ನ ಪ್ರಾಯ ನೆಪ್ ಮಾಡೂ ಸಣ್ಣ ಸೊಂಟ, ಹಳೇ ಬೇಡಂಗಿರೋ ಚೂಪು ಕಣ್ಣು, ಮಳೆ ಬಿದ್ದಾಗಿರೋ ಸೂಳೆಕೆರೆ ಗುಡ್ಡದಂಥಾ ಮಗಳ ನುಣುಪಂಡು ದುರುಗವ್ವಗೆ ಚಿಂತಿಗೀಡು ಮಾಡಿದ್ದವು. ಹತ್ತನೇ ಕ್ಲಾಸು ದಾಟಲು ಅವಳ ಜವಾನಿ ಅಡ್ಡಲಾಗಿ ಈರವ್ವ ಹೆಣಗಿಬಿಟ್ಟಳು.

ಅಷ್ಟರಲ್ಲೇ ಆಗಲೇ ಎರಡು ಮೂರು ಸಾರಿ ಮನೆ ಹಿತ್ಲಲ್ಲಿ ಹಟ್ಟಿ ಹುಡುಗರ ತೆಕ್ಕೇಲಿ, ದಾವಣಗೆರೆ ಬಂದೂರ್ ಕ್ಯಾಂಪಿನ ಸುಧಾ ಲಾಡ್ಜಲ್ಲಿ ಗೌಡರ ಮಗನ ಜೊತಿಗೆ ಕಾಣಿಸಿಕೊಂಡು ದುರುಗವ್ವನ ಹತ್ರ ಮೆಟ್ಟಿನೇಟು ತಿಂದಿದ್ದಳು. ಒಮ್ಮೆ ಇಬ್ಬರೂ ಆಸ್ಪತ್ರೆ ನೋಡಿದ್ದೂ ಆಯಿತು. ಮಾಸ್ತ್ಯಪ್ಪ ಮಗಳ ಕಥೆ ನೋಡಿ ಎತ್ತಲೋ ನಡೆದವನು ಮತ್ತೆಂದೂ ಮನೆ ಕಡೆ, ಊರ ಕಡೆ ಬರಲಿಲ್ಲ. ತನ್ನ ಕಥೆ ತಾನೇ ಮುಗಿಸಿಕೊಂಡ ಅಂತ ಹಟ್ಟಿನ ಮಾತಾಡಿದ್ರೆ, ಅವ್ವ–ಮಗಳೇ ಮದ್ದಿಕ್ಕಿ ಮಾಸ್ತ್ಯಪ್ಪನ್ನ ತಗುದ್ರು ಅಂತ ಗುಸಗುಸ ಅನ್ನೋರು.

ಈ ನಡುವೆ ಆದಷ್ಟು ಬೇಗ ಮದುವೆ ಮಾಡಿಬಿಡನ ಅಂತ ದುರುಗವ್ವ ಎಲ್ಲೆಲ್ಲಿಂದಲೋ ಗಂಡುಗಳ ಕರೆಸಿದಳು. ಈರವ್ವ ಯಾರನ್ನೂ ಮೆಚ್ಚಿಕೊಳ್ಳಲಿಲ್ಲ. ದುರುಗವ್ವ ಕೂರಿಸಿಕೊಂಡು 'ಮಲಗಾದೇ ಜೀವನ ಅಲ್ಲ. ಬದುಕು ಗಟ್ಟಿ ಮಾಡಿಕೊಂಡ್ರೆ ಸಾಯತನಕ ಮಕ್ಕಬೌದು. ಮುಚ್ಕಂಡು ಯಾವನಾರೆ ಗಂಟು ಹಾಕ್ಕಂಡು ಮರ್ಯಾದೆ ಉಳ್ಸು. ಇಲ್ಲಾ ಅಂದ್ರೆ ನೀ ಮಕ್ಕಂಡಾಗ ದುಂಡಿಗಲ್ ಎತ್ತಿ ಹಾಕಿದ್ರೂ ಅಚ್ಚರಿ ಪಡಬೇಡ' ಅಂದಾಗ ಮೆತ್ತಗಾದಳು ಈರವ್ವ. ಹತ್ತಾರು ಗಂಡುಗಳ ನಂತರ ರಾಣೆಬೆನ್ನೂರಿನ ಪಕ್ಕದ ಹಳ್ಳಿಯ ಒಬ್ಬ ಹುಡುಗ ಬಂದು ನೋಡಿದ. ಸರ್ಕಾರಿ ಸ್ಕೂಲಲ್ಲಿ ಜವಾನನ ಕೆಲಸ. ಸಂಪನ್ನ. ಮಾತು ಕಮ್ಮಿ. ತೀರಾ ದಪ್ಪನೂ ಅಲ್ಲ, ಸಣ್ಣನೂ ಅಲ್ಲ, ಹಂಗ್ ಇದ್ದ. ಮನೆ ಕಡೆ ಅಷ್ಟಕ್ಕಷ್ಟೆ. ಒಬ್ನೆ ಮಗ. ತಂದೆ ಇಲ್ಲದ ಹುಡುಗ. ಸೊಸೆ ಮನೆ ಕೆಲಸ ಮಾಡಿಕೊಂಡು ಹೋದರೆ ತನಗೂ ಮಗನಿಗೂ ಆಸರೆ ಅಂತ ಆ ತಾಯಿ ದುರುಗವ್ವನ ಮನೆ ನುಗ್ಗಿದ್ದಳು. ನೋಡಿಕೊಂಡು ಹೋಗಿ ವಾರ ಕಳೆದರೂ ರಾಣೆಬೆನ್ನೂರು ಕಡೆಯಿಂದ ಯಾವ ಸುದ್ದಿ ಬರಲಿಲ್ಲ. ದುರುಗವ್ವ ಚಿಂತಿಗೆ ಬಿದ್ದಳು. ಹುಡುಗ ದುರುಗವ್ವನ ಮನಸಿಗೆ ಬಂದಿದ್ದ. ಯಾರ್ಯಾರಿಂದಲೋ ಸುದ್ದಿ ಕಳಿಸಿ ವಿಚಾರಿಸಿದಳು. ಹುಡುಗ ಯಾಕೋ ಈರವ್ವನ ದೇಹದ ಉಬ್ಬುತಗ್ಗು ನೋಡಿ ಒಲ್ಲೆ ಅಂದ್ನಂತೆ ಅನ್ನೋ ವಿಚಾರ ಕೇಳಿ ದುರುಗವ್ವನ ಎದೆ ಧಸಕ್ಕೆಂದಿತ್ತು. ಸಣ್ಣ ವಯಸ್ಸಿಗೇ ಈರವ್ವ ಹೆಂಗಸಂತೆ ಕಾಣ್ತಿದ್ದದ್ದು ನಿಜ.

ಅಂದು ಸುಟ್ಟ ಬೆಕ್ಕಿನಂಗೆ ದುರುಗವ್ವ ಓಡಾಡಿ ದಾರಿ ತಿಳಿದೇ ಹುಚ್ಚಂಗಿದುರ್ಗದ ಸಾಬಿರವ್ವನ್ನ ಕಂಡು ಇದ್ದ ವಿಚಾರ ಹೇಳಿ, 'ನೀನೇ ಈ ಗಂಡು ಹಿಡಿದುಕೊಡು' ಅಂತ ಅಡ್ಡಡ್ಡ ಬಿದ್ದಳು. ಸಾಬರ ತಾಯಿ ಆದರೂ ಸಾಬಿರವ್ವ ಎಲ್ಲಮ್ಮನನ್ನು ಆರಾಧಿಸಿ ನಡೆದುಕೊಳ್ಳುತ್ತಿದ್ದಳು. ಮನೆಯ ಮಕ್ಕಳಿಗೂ ಗೊತ್ತಿಲ್ಲದೇ ಪ್ರತಿ ಶುಕ್ರವಾರ ಎಲ್ಲಮ್ಮನ ಆರಾಧನೆ ಜೋರಾಗಿ ಮಾಡಿ ಪುನೀತಳಾಗೋ ಸುದ್ದಿ ದುರ್ಗದ ಕೆಲವರಿಗೆ ಮಾತ್ರ ಗೊತ್ತು. ಜೊತೆಗೆ ಕಷ್ಟ ಅಂತ ಬಂದವರಿಗೆ ಪೂರ್ವಜರಿಂದ ಕಲಿತ ಮದ್ದಿನ ವಿದ್ಯೆಯಿಂದ ಉಪಕಾರದ ಕೆಲಸ ಮಾಡುತ್ತಾ ಬಂದಿದ್ದಳು. ಯಾರಿಂದಲೂ ಒಂದು ಚಿಕ್ಕಾಸು ಪಡೆಯದೇ ದೇವಿ ಸೇವಾ ಅಂತ ಮಾಡುತ್ತಿದ್ದಳು.

ದುರುಗವ್ವನ ಕತೆ ಕೇಳಿ 'ಹಾನಿಗಲ್ಲ, ಸಂಸಾರಕ್ಕಷ್ಟೆ, ಬದ್ಕಕ್ಕಿದು, ಸಾಯಿಸಲಿಕ್ಕಲ್ಲ, ಎಲ್ರು ಸಂದಾಕಿರ್ತಿವಿ ಅನ್ನೋ ಸಂಕಲ್ಪ ಮಾಡಿ ತಗ' ಅಂತ ಕೈ ಮಡಸಿ ಏನೋ ಕೊಟ್ಟು, 'ಊಟದಲ್ಲಿ ಬೆರೆಸಿ ಆ ಹುಡುಗನಿಗೆ ತಿನ್ನಿಸು, ಮಗಳ ಬಾಳು ಬಂಗಾರ ಆಗುತ್ತೆ' ಅಂದಿದ್ದಳು. ಅದರಂತೆ ಮತ್ತೊಮ್ಮೆ ಹೆಣ್ಣು ನೋಡಲು ಬರುವಂತೆ ಹಿರಿಯರಿಂದ ಒತ್ತಡ ಹಾಕಿಸಿ ತಾಯಿ ಮಗ ಬಂದು ಉಂಡು ಹೋದರು. ಚನ್ನಗಿರಿಯಿಂದ ಪಾರ್ಲರ್ ಹುಡುಗೀನ ಕರೆಸಿ ಈರವ್ವಂಗೆ ಬಣ್ಣ ಬಳಿಸಿ ಹೊಸತರ ಬಟ್ಟೆ ಉಡಿಸಿದ್ದಳು ದುರುಗವ್ವ! ಒಲ್ಲೆ ಅಂದವ ಅದೇನು ಮಾಯವೋ ಒಂದೇ ಏಟಿಗೆ ಮದುವೆ ದಿನ ಗೊತ್ತು ಮಾಡಿ ಅಂತ ಕುಂತ; ದುರುಗವ್ವನ ಎದೆ ಮುಗಿಲಿಗಡರಿದ ಗಾಳಿಪಟ ಆಗಿತ್ತು.

ಹಾಗೆ ಸಿಕ್ಕ ಗಂಡು ಹುಚ್ಚೆಂಗಪ್ಪ! ಮದುವೆ ಆಯಿತು. ಹುಚ್ಚೆಂಗಪ್ಪ ಈರವ್ವನ ಸುತ್ತ ಬುಗುರಿಯಾದಂಗಾಗಿ ಅವ್ವನ್ನ ಮರೆತು ಹೆಂಡ್ತಿ ಊರಲ್ಲಿ ಝಾಂಡಾ ಹೂಡಿಬಿಟ್ಟ. ಹುಚ್ಚೆಂಗಪ್ಪನ ತಾಯಿ ಬಂದು ಬಂದು ಮಗನ ಮನೆಗೆ ಕರೆದರೂ ಮಕ ತಿರುಗಿಸಿದ. ಮಗನ ನೋಡಿ ಕಣ್ಣೀರು ಕಪಾಳಕ್ಕಿಳಿಸಿ ಹೋಗೋದಷ್ಟೇ ಈ ತಾಯಿಯ ಕಾಯಕವಾಯಿತು. ಅದೇ ಕೊರಗಲ್ಲಿ ಆ ತಾಯಿ ಮಗನ ನೆನೆದು, ಊಟ ಬಿಟ್ಟು, ಒಂಟಿ ಮನೆಯಲ್ಲಿ ಎಂದೋ ಕೊನೆಯಾಗಿದ್ದಳು. ಮೂರು ದಿನದ ನಂತರ ಕೇರಿಯವರು ನೋಡಿ ಮಗನಿಗೆ ಸುದ್ದಿ

